◆ **‘ಬೂತಯ್ಯನ ಮಗ ಅಯ್ಯು’ ಸಿನಿಮಾದ ಕ್ಲೈಮ್ಯಾಕ್ಸ್ ಸಿನಿಮಾ ವಿದ್ಯಾರ್ಥಿಗಳಿಗೆ ಪಠ್ಯದಂತಿದೆ, ಈಗಲೂ ಬೆರಗು ಹುಟ್ಟಿಸುವಂತಿದೆ. ಆ ಕಾಲದಲ್ಲಿ ಅದನ್ನು ಚಿತ್ರೀಕರಿಸಿದ ತಂಡದಲ್ಲಿ ನೀವೂ ಇದ್ದಿರಿ. ಆ ಅನುಭವವನ್ನು ಹಂಚಿಕೊಳ್ಳಿ.**

ಆ ಕಾಲದಲ್ಲಿ ‘ಬೂತಯ್ಯನ ಮಗ ಅಯ್ಯು’ ಸಿನಿಮಾ ಕ್ಲೈಮ್ಯಾಕ್ಸ್ ಒಂದರ ಚಿತ್ರೀಕರಣವೇ ಸುಮಾರು 20 ದಿನ ನಡೆಯಿತು. ನಾವೆಲ್ಲ ನೀರಿನಲ್ಲಿ ನಿಂತೇ ಕೆಲಸ ಮಾಡುತ್ತಿದ್ದೆವು. ತೆಪ್ಪಕ್ಕೆ ಒಂದು ಹಗ್ಗ ಕಟ್ಟಿದ್ದರು. ಕ್ಯಾಮೆರಾ ಅತ್ತಿತ್ತ ಓಲಾಡದಂತೆ ಎಚ್ಚರ ವಹಿಸಿದ್ದೆವು. ಸಾಹಸ ನಿರ್ದೇಶಕ ಶಿವಯ್ಯ ಅವರು ತುಂಬಾ ಮುತುವರ್ಜಿಯಿಂದ ಪಳಗಿದ ಈಜುಗಾರರನ್ನು ಅಲ್ಲಿಗೆ ಕರೆಸಿದ್ದರು. ಯಾವುದೇ ಅನಾಹುತ ಆಗದಂತೆ ನಿಗಾ ವಹಿಸಿ, ಕೆಲಸ ಮಾಡಿಸುತ್ತಿದ್ದರು. ಸಾಮಾನ್ಯವಾಗಿ ಒಂದು ದಿನಕ್ಕೆ 500ರಿಂದ 800 ಅಡಿ ಫಿಲ್ಮ್ ಎಕ್ಸ್‌ಪೋಸ್ ಮಾಡುವುದು ಆಗ ವಾಡಿಕೆಯಾಗಿತ್ತು. ಆ ಸಿನಿಮಾ ಕ್ಲೈಮ್ಯಾಕ್ಸ್ ಒಂದರದ್ದೇ 18 ಸಾವಿರ ಅಡಿಗಳಷ್ಟು ಚಿತ್ರೀಕರಣ ಮಾಡಿಕೊಂಡೆವು.

ಶಿವನಸಮುದ್ರದಲ್ಲಿನ ಆ ಅನುಭವ ಮರೆಯಲಾಗದು. ಮೊದಲು ಸೊಂಟಕ್ಕಿಂತ ಕೆಳಮಟ್ಟದಲ್ಲಿ ನೀರು ಇತ್ತು. ಚಿತ್ರೀಕರಣ ಮುಗಿಸುವ ಹೊತ್ತಿಗೆ ಹೊಟ್ಟೆ ಭಾಗಕ್ಕಿಂತ ಮೇಲ್ಮಟ್ಟಕ್ಕೆ ಹರಿಯುವಷ್ಟು ನೀರು ನದಿಯನ್ನು ಸೇರಿತ್ತು. ಐವತ್ತು ಅರವತ್ತು ಅಡಿ ದೂರದಲ್ಲಿ ಜಲಪಾತವಿತ್ತು. ಆದರೂ ಎಲ್ಲರೂ ತುಸುವೂ ಎದೆಗುಂದದೆ ಕೆಲಸ ಮಾಡಿದೆವು. ಆ ಸಿನಿಮಾದಲ್ಲಿ ಎತ್ತುಗಳ ಗಾಡಿ ಓಡಿಸುವ ದೃಶ್ಯವೊಂದು ಇದೆ. ಅದನ್ನು ನೋಡಿದಾಗ ನಾನು ‘ಬೆನ್ಹರ್’ ಸಿನಿಮಾದಲ್ಲಿನ ದೃಶ್ಯದ ಕಾಪಿ ಇದಲ್ಲವೇ ಎಂದು ಆಗಲೇ ನೇರವಾಗಿ ಹೇಳಿದ್ದೆ. ನಿರ್ದೇಶಕ ಸಿದ್ದಲಿಂಗಯ್ಯನವರು ಸುಮ್ಮನೆ ನಕ್ಕು, ಕೆಲಸ ಮುಂದುವರಿಸಿದ್ದರು. ಮಳೆಯ ನಡುವೆಯೂ ಆ ದೃಶ್ಯಗಳನ್ನು ಚಿತ್ರೀಕರಿಸಿದ್ದು ರೋಚಕ ಅನುಭವ. 18 ಸಾವಿರ ಅಡಿಗಳಷ್ಟು ಚಿತ್ರೀಕರಣ ಮಾಡಿ ಕೊಂಡಿದ್ದರೂ, ಬಳಕೆಯಾದದ್ದು 500-600 ಅಡಿಗಳಷ್ಟೇ.



ಶಿವಾಜಿ ಗಣೇಶನ್ ಅವರೊಂದಿಗೆ ಬಸವರಾಜು

◆ **ಸಿದ್ದಲಿಂಗಯ್ಯ, ಪುಟ್ಟಣ್ಣ ಕಣಗಾಲ್ ಎರಡು ಭಿನ್ನ ಮಿದುಳುಗಳು. ಅವರಿಬ್ಬರ ಜೊತೆ ಕೆಲಸ ಮಾಡಿರುವ ನೀವು ಆ ಇಬ್ಬರನ್ನೂ ಹೇಗೆ ವಿಶ್ಲೇಷಿಸುವಿರಿ?**

ಸಿದ್ದಲಿಂಗಯ್ಯನವರು ಹಳ್ಳಿಯವರನ್ನು ಬಲ್ಲವರಾಗಿದ್ದರು. ಹೀಗಾಗಿ ನೆಲಮೂಲವನ್ನು ಬಹಳ ಸೊಗಸಾಗಿ ಹಿಡಿಯುತ್ತಿದ್ದರು. ಅವರು ತುಂಬಾ ಕಷ್ಟಪಟ್ಟ ನಂತರ ನಿರ್ದೇಶಕರಾಗಿದ್ದವರು. ರವಿ, ವಿಠಲಾಚಾರ್ಯ ಅವರಂತಹ ಘಟಾನುಘಟಿಗಳಲ್ಲಿ ಚಿತ್ರೀಕರಣದ ಕೌಶಲ ಕಲಿತು ಆಮೇಲೆ ಸ್ವತಂತ್ರ ನಿರ್ದೇಶಕರಾದರು. ಅವರು ಸಾಕಷ್ಟು ಹೋಂವರ್ಕ್ ಮಾಡಿಕೊಂಡೇ ಸೆಟ್‌ಗೆ ಬರುತ್ತಿದ್ದರು. ಫಿಲ್ಮ್ ವೇಸ್ಟ್ ಆಗಬಾರದು ಎಂಬ ಎಚ್ಚರ ಅವರಲ್ಲಿ ಸದಾ ಇರುತ್ತಿತ್ತು. ಶಾಟ್ ಶುರು ಮಾಡಿ, ನಿಲ್ಲಿಸಿದಾಗ ಏಳೆಂಟು ಫ್ರೇಮ್‌ಗಳು ಹಾಳಾಗುವುದು ಸಹಜ. ಅವರಿಗೆ ಅದನ್ನೂ ನಾವು ಮನದಟ್ಟು ಮಾಡಿ,